# ಜಾಹೀರಾತುಗಳ ಜಗತ್ತು

'ಪ್ರತಿಭೆಯೊಂದಿರಬೇಕು, ವ್ಯುತ್ಪತ್ತಿ ಮತಿ ಬೇಕು! ಅಭ್ಯಾಸ ಗುರು ಸೇವೆ ಬೇಕು! ಈ ಹಳೆಯ ಪಟ್ಟಿಗಿನ್ನೊಂದು ಸೇರಿಸಬೇಕು! ಕವಿಗೆ ಜಾಹೀರಾತು ಬೇಕು!' – ಹೀಗೆನ್ನುತ್ತಾರೆ ಕವಿ ಎಸ್.ವಿ. ಪರಮೇಶ್ವರ ಭಟ್ಟರು ತಮ್ಮೊಂದು ವಿಡಂಬನ ಮುಕ್ತಕದಲ್ಲಿ. ಕವಿಯಾದವನಿಗೆ ಪ್ರತಿಭೆ, ವಿದ್ವತ್ತು ಇತ್ಯಾದಿ ಏನೆಲ್ಲ ಇದ್ದರೂ ಸಾಲದು; ಆತನ ಬಗೆಗೆ ಪ್ರಚಾರ ಅಥವಾ ಜಾಹೀರಾತು ಅತ್ಯಂತ ಅಗತ್ಯ; ಆಗ ಮಾತ್ರ ಜನ ಅವನನ್ನು ಗುರುತಿಸುತ್ತಾರೆ; ಯೋಗ್ಯತೆಯಿದ್ದೂ ಪ್ರಚಾರವಿಲ್ಲದ ಕವಿ ಕಾಡುಕುಸುಮದಂತೆ ಅಜ್ಞಾತನಾಗಿಯೇ ಉಳಿಯಬೇಕಾಗುತ್ತದೆ– ಇದು ಭಟ್ಟರ ಅಭಿಪ್ರಾಯ, ಕವಿ–ಕಲಾವಿದರನ್ನು ಬಿಡದೆ ಎಲ್ಲೆಡೆಗೂ ವ್ಯಾಪಿಸಿರುವ ಜಾಹೀರಾತಿನ ಮಾಯಾಜಾಲವನ್ನು ಈ ಮುಕ್ತಕ ತೋರಿಸುತ್ತದೆ. ಜಾಹೀರಾತು ಎಂಬುದು ಆಧುನಿಕ ಬದುಕಿನ ಒಂದು ಅವಿಭಾಜ್ಯ ಅಂಗವೇ ಆಗಿದೆಯೆಂದರೆ ತಪ್ಪಾಗಲಾರದು. ವಾಣಿಜ್ಯ ಕ್ಷೇತ್ರವಂತೂ ಜಾಹೀರಾತುಗಳಿಲ್ಲದಿದ್ದರೆ ಕುಸಿದೇಬಿಡುತ್ತದೆನ್ನುವ ಕಾಲದಲ್ಲಿ ನಾವಿದ್ದೇವೆ.

ಉತ್ಪಾದಕ ಹಾಗೂ ಗ್ರಾಹಕನ ನಡುವೆ ಸಂಪರ್ಕ ಸೃಷ್ಟಿಸುವುದೇ ಜಾಹೀರಾತುಗಳ ಮೂಲ ಉದ್ದೇಶ. ಒಬ್ಬ ಚತುರ ಮಧ್ಯವರ್ತಿ ತನ್ನ ವಾಕ್ಚಾತುರ್ಯದಿಂದ ಗಿರಾಕಿಯನ್ನು ಆಕರ್ಷಿಸಿ, ವ್ಯಾಪಾರಿಯ ಬಳಿಗೆ ಕರೆದೊಯ್ದು ವ್ಯಾಪಾರ ಕುದುರಿಸುವಂತೆ, ಜಾಹೀರಾತುಗಳೂ ವಿವಿಧ ತಂತ್ರಗಳನ್ನು ಬಳಸಿ ಗ್ರಾಹಕನನ್ನು ಸೆಳೆಯುತ್ತವೆ. ಪತ್ರಿಕೆಗಳ ಮೂಲಕವೋ, ದೃಶ್ಯ ಮಾಧ್ಯಮಗಳ ಮೂಲಕವೋ, ಭಿತ್ತಿಚಿತ್ರಗಳ ಮೂಲಕವೋ ತಮ್ಮ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸುವ ಜಾಹೀರಾತು ತಾವು ಪ್ರಚಾರಮಾಡುವ ಸರಕುಗಳ ಯೋಗ್ಯತೆಯನ್ನು ವೈಭವೀಕರಿಸುತ್ತಾ ಗ್ರಾಹಕರನ್ನು ಮರಳು ಮಾಡಿ, ಉತ್ಪಾದಿತ ವಸ್ತುಗಳ ವಿಕ್ರಯ ಕ್ಷಮತೆ (Saleability)ಯನ್ನು ಹೆಚ್ಚಿಸಲು ಹೆಣಗಾಡುತ್ತವೆ. ಮಾರಾಟವಾಗಬೇಕಾಗಿರುವ ಪದಾರ್ಥ ಯಾವುದೇ ಇರಲಿ, ಅದರ ಗುಣಮಟ್ಟ ಹೇಗೇ ಇರಲಿ, ಅದನ್ನು ಕುರಿತು ಜಾಹೀರಾತು ಬಣ್ಣ ಬಣ್ಣದ ಮಾತುಗಳ ಅಥವಾ ದೃಶ್ಯಗಳ ಮೂಲಕ ಆ ಪದಾರ್ಥದ ಸುತ್ತ ಒಂದು ಭ್ರಾಮಕ ಪರಿವೇಷವನ್ನೇ ಸೃಷ್ಟಿಸುತ್ತದೆ. ಅಮಾಯಕನಾಗಿರುವ ಗ್ರಾಹಕ ಸಹಜವಾಗಿ ಅದರತ್ತ ಆಕರ್ಷಿತನಾಗುತ್ತಾನೆ. ಈ ಪ್ರಕ್ರಿಯೆಯಲ್ಲಿ ಗ್ರಾಹಕ ಪದಾರ್ಥದ ಮೂಲ ಬೆಲೆಯ ಜೊತೆಗೆ ಜಾಹೀರಾತಿಗೆ ತಗಲಿರುವ ವೆಚ್ಚದ ಪಾಲನ್ನೂ ತೆರಬೇಕಾಗುತ್ತದೆ. ಹೀಗಾಗಿ ಆತ 'ತನ್ನ ಶಿಲುಬೆಯನ್ನು ತಾನೇ ಹೊರುವ' ಪರಿಸ್ಥಿತಿಗೆ ಒಳಗಾಗುತ್ತಾನೆನ್ನಬಹುದು. ಜಾಹೀರಾತುಗಳನ್ನು ಅವಲಂಬಿಸದೇ ಗ್ರಾಹಕರನ್ನು ತಲುಪುವ ಸಾಮರ್ಥ್ಯವಿರುವ ವಾಣಿಜ್ಯೋದ್ಯಮ ಈ ಕಾಲದಲ್ಲಿ ಸುಲಭ ಸಾಧ್ಯವಲ್ಲ. ಉತ್ತಮ ಸರಕುಗಳಲ್ಲದೆ, ಐಎಸ್ಐ ಮುದ್ರೆಯಿಂದ ತಪ್ಪಿಸಿಕೊಳ್ಳುವ ಕಳಪೆ ಗುಣಮಟ್ಟದ ಪದಾರ್ಥಗಳೂ ಜಾಹೀರಾತುಗಳ ಒತ್ತಾಸೆಯಿಂದ ಗ್ರಾಹಕರ ಕೈ ಸೇರುವುದೂ ಉಂಟು. ಟಿ.ವಿ.ಯಲ್ಲಿ ಚಾಕೊಲೇಟ್ ಮುಂತಾದ ಸಿಹಿ ತಿನಿಸುಗಳ ಜಾಹೀರಾತುಗಳನ್ನು ಮತ್ತೆ ಮತ್ತೆ ನೋಡುತ್ತಿರುವ ಎಳೆಯರು ಸಹಜವಾಗಿ ಜಿಹ್ವಾ ಚಾಪಲ್ಯಕ್ಕೆ ಒಳಗಾಗುತ್ತಾರೆ; ಪರಿಣಾಮವಾಗಿ ಅವರ ಆರೋಗ್ಯಕ್ಕೆ ಧಕ್ಕೆಯಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ಆಧುನಿಕ ಮಾನವನಲ್ಲಿರುವ ಕೊಳ್ಳುಬಾಕ ಪ್ರವೃತ್ತಿಯನ್ನು ಈಗಿನ ಜಾಹೀರಾತುಗಳು ಉತ್ತೇಜಿಸುತ್ತವೆ.

ಇವತ್ತು ನಾವು ನೋಡುತ್ತಿರುವ ಜಾಹೀರಾತುಗಳ ಬಗೆಗೆ ಹೇಳಲೇಬೇಕಾದ ಇನ್ನೊಂದು ಮಾತಿದೆ. ಉಡುಪು, ಔಷಧಿ ಪದಾರ್ಥ, ಪ್ರಸಾಧನ ವಸ್ತು– ಇಂಥ ಅನೇಕ ಸರಕುಗಳನ್ನು ಕುರಿತಾದ ಹಲವು ಜಾಹೀರಾತುಗಳು ಸಭ್ಯತೆಯ ಗೆರೆ ಮೀರಿ ಪ್ರದರ್ಶಿತವಾಗುತ್ತಿವೆ. ದೂರದರ್ಶನದ ವಿವಿಧ ವಾಹಿನಿಗಳಲ್ಲಿ ಪುನಃ ಪುನಃ ಪ್ರತ್ಯಕ್ಷವಾಗುವ ಕೆಲವು ಜಾಹೀರಾತುಗಳಂತೂ ವೀಕ್ಷಕರ ಪಾಲಿಗೆ ಮುಜುಗರ ಉಂಟು ಮಾಡುವಂತಿರುತ್ತವೆ. ಹೆಣ್ಣಿನ ದೇಹವನ್ನೇ ಬಂಡವಾಳ ಮಾಡಿಕೊಂಡು ವಿಜೃಂಭಿಸುತ್ತಿರುವ ಇಂಥ ಜಾಹೀರಾತುಗಳು ಅತ್ಯಂತ ಅನಾರೋಗ್ಯಕರ ಕೀಳು ಕಾಮನೆಗಳನ್ನು ಪ್ರಚೋದಿಸುತ್ತವೆ. ಇತ್ತೀಚೆಗೆ ಹೆಚ್ಚುತ್ತಿರುವ ದೌರ್ಜನ್ಯಗಳ ಹಾವಳಿಗೆ ಇಂಥ ಜಾಹೀರಾತುಗಳ ಕಾಣಿಕೆಯೂ ಸೇರಿವೆ ಎನ್ನಬಹುದೇನೋ.

ಸಮೂಹ ಮಾಧ್ಯಮಗಳ ಅವಿಭಾಜ್ಯ ಆದಾಯ ಮೂಲವಾಗಿರುವ ಹಾಗೂ ಉತ್ಪಾದಕ– ಗ್ರಾಹಕರ ನಡುವೆ ಸಂಪರ್ಕ ಸಾಧನವಾಗಿರುವ ಜಾಹೀರಾತುಗಳನ್ನು ಸಂಪೂರ್ಣ ನಿಷೇಧಿಸಬೇಕೆಂಬುದು ಸಾಧುವಲ್ಲ. ಜೊತೆಗೆ ಜಾಹೀರಾತುಗಳನ್ನು ನಿರ್ಮಾಣ ಮಾಡುವುದೇ ಈ ಕಾಲದಲ್ಲಿ ದೊಡ್ಡ ಉದ್ಯಮವಾಗಿ ಬೆಳೆದಿದ್ದು, ಲಕ್ಷಾಂತರ ಮಂದಿಯ ಬದುಕಿಗೆ ದಾರಿಯಾಗಿರುವುದನ್ನು ಮರೆಯುವಂತಿಲ್ಲ. ಆದಾಗ್ಯೂ ಜಾಹೀರಾತುಗಳ ಪ್ರಕಟಣೆ, ಪ್ರದರ್ಶನಗಳಲ್ಲಿ ಒಂದು ನೈತಿಕ ಮಾನದಂಡದ ಬಳಕೆಯಾಗಬೇಕಾದುದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ತೀರಾ ಅಗತ್ಯವೆಂಬುದನ್ನೂ ಮರೆಯಬಾರದಲ್ಲವೆ?

**■ ವೈನತೇಯ**

## ಮಾತೇ ಮುತ್ತು

★ ಶಿಕ್ಷಣ ಎಂದರೆ ಅನುಕೂಲ ಪರಿಸ್ಥಿತಿಯಲ್ಲಿ ಆಭರಣ ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿ ಒಂದು ಆಶ್ರಯ.

–ಅರಿಸ್ಟಾಟಲ್

★ ಸಂತೋಷ ಯಾವುದರಲ್ಲಿದೆ ಎಂದು ಹುಡುಕುತ್ತಾ ಹೋದರೆ ನೀವು ಎಂದೂ ಸಂತೋಷವಾಗಿರುವುದಿಲ್ಲ. ಬದುಕಿನ ಅರ್ಥ ಹುಡುಕುತ್ತಾ ಹೋದರೆ ನೀವು ಯಾವತ್ತೂ ಬದುಕಿರುವುದಿಲ್ಲ.

–ಆಲ್ಬರ್ಟ್ ಕಾಮೂ

★ ಅರ್ಥ ಜಗತ್ತು ಇನ್ನರ್ಥ ಜಗತ್ತಿನ ಸಂತೋಷಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲ.

–ಜೇನ್ ಆಸ್ಟಿನ್

★ ನಮ್ಮ ಆಲೋಚನೆಗಳು ಏನನ್ನು ಮಾಡಿವೆಯೋ ಅದೇ ನಾವು. ಆಲೋಚನೆಗಳ ಬಗ್ಗೆ ಎಚ್ಚರಿಕೆ ವಹಿಸಿ. ಶಬ್ದಗಳು ಆಮೇಲೆ; ಆಲೋಚನೆಗಳು ಮೊದಲು. ಅವು ನಮ್ಮ ಜತೆಗೇ ಪಯಣಿಸುತ್ತವೆ.

–ಸ್ವಾಮಿ ವಿವೇಕಾನಂದ

★ ಒಂದು ಶಿಲ್ಪದ ಹಾಗೆ, ಅಗತ್ಯ ಬಿದ್ದರೆ ನಿನ್ನ ಗೆಳೆಯನನ್ನು ನೀನೇ ಕೆತ್ತಿಕೋ.

–ರೂಮಿ

★ ಜೀವನ ಎನ್ನುವುದು ಬುದ್ಧಿವಂತನಿಗೆ ಕನಸು, ಮೂರ್ಖನಿಗೆ ಆಟ, ಸಿರಿವಂತನಿಗೆ ತಮಾಷೆ ಮತ್ತು ಬಡವನಿಗೆ ದುರಂತ.

–ಶೊಲೋಮ್ ಅಲೆಚೆಮ್

★ ಏನು ಪ್ರಪಂಚವಿದು, ಏನು ಧಾಳಾಧಾಳಿ
ಏನದ್ಭುತಾಪಾರಶಕ್ತಿ ನಿರ್ಘಾತ
ಮಾನವನ ಗುರಿಯೇನು? ಬೆಲೆಯೇನು?
ಮುಗಿವೇನು?
ಏನರ್ಥವಿದಕೆಲ್ಲ ಮಂಕುತಿಮ್ಮ.

–ಡಿ.ವಿ.ಗುಂಡಪ್ಪ

★ ನಾನು ವಿಫಲನಾಗಿಲ್ಲ; ಕೆಲಸ ಮಾಡದ ಹತ್ತು ಸಾವಿರ ವಿಧಾನಗಳನ್ನಷ್ಟೇ ನಾನು ಕಂಡುಹಿಡಿದಿದ್ದೇನೆ.

–ಥಾಮಸ್ ಎಡಿಸನ್

★ ಸೌಂದರ್ಯಕ್ಕೆ ಒಡವೆಗಳು ಬೇಕಿಲ್ಲ. ಮೃದುತ್ವ ಒಡವೆಗಳ ಭಾರವನ್ನು ತಾಳುವುದಿಲ್ಲ.

–ಮುನ್ಷಿ ಪ್ರೇಮ್‌ಚಂದ್

★ ದುಃಖ ಬಂದಾಗ ನಗುವುದರಿಂದ ದುಃಖದಲ್ಲೂ ಸುಖ ಸಿಗುತ್ತದೆ.

–ರಾಮಕೃಷ್ಣ ಪರಮಹಂಸ

★ ಜೀವನ ಒಂದು ನಾಟಕವಿದ್ದಂತೆ. ಆದರೆ ಇಲ್ಲಿ ವಿಶ್ರಮಿಸಲು ಸೈಡ್‌ವಿಂಗ್‌ಗಳಿಲ್ಲ.

–ಟಿ.ಪಿ.ಕೈಲಾಸಂ

★ ನಿಮ್ಮ ವೈರಿ ತಪ್ಪುಗಳನ್ನು ಮಾಡುವಾಗ ಯಾವ ಕಾರಣಕ್ಕೂ ಹಸ್ತಕ್ಷೇಪ ಮಾಡಬೇಡಿ.

–ನೆಪೋಲಿಯನ್ ಬೊನಪಾರ್ಟ್

★ ಪರಸ್ಪರರನ್ನು ಪ್ರೀತಿಸಿ, ಏಕೆಂದರೆ ಪ್ರೀತಿ ದೇವರಿಂದ ಬಂದದ್ದು. ಯಾರು ಪ್ರೀತಿಸುತ್ತಾನೋ ಅವನು ದೇವರನ್ನು ಅರಿತಿದ್ದಾನೆ ಎಂದರ್ಥ.

–ಬೈಬಲ್